1237

ಜಿಯೋಲಾಜಿಕಲ್.

ಇನ್ಸ್ಟ್ರಾಮೆಂಟ್.

ತಾರೀಖು 27ನೆ ಜುಲೈ 1904.

ನಂ. 45--ಎಸ್., ಮೈಸೂರು ಜಿಯೋಲಾಜಿಕಲ್ ಇಲಾಖೆಯ ಅಪ್ರೆಂಟಿಸ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಪಿ. ಸಂಪತ ಯ್ಯಂಗಾರ್, ಎಂ. ಎ., ಯವರು 1903ನೆ ಡಿಸೆಂಬರ್ 13ನೆ ತಾರೀಖಿನಾರಭ್ಯ ಮೂರನೇ ಕ್ಲಾಸ್ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 29ನೆ ಜುಲೈ 1904.

ನಂ. 50—ಎಸ್., ಮೈಸೂರ ಸರ್ವಿಸ್ ರೆಗ್ಯುಲೇಷಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಜಿಯೋಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಎಚ್. ಕೆ. ಸ್ಲೇಟರ್ ಯವರಿಗೆ 1904ನೆ ಜುಲೈ 5ನೆ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೆ ಜುಲೈ 1904.

ನಂ. 56—ಎಸ್., ಮೈಸೂರ ಜಿಯೋಲಾಜಿಕಲ್ ಇಲಾಖೆಯ ರಿಜಿಸ್ಟ್ರಾರಾದ ಮೆ॥ ಬಿ. ಸುಬ್ಬರಾವ್, ಬಿ. ಎ., ಯವರಿಗೆ 1904ನೆ ಮೇ 25ನೆ ಮುಕ್ಕಂ 736—ಎಸ್. ನೆ ನಂಬರ್ ಜಿಯೋಲಾಜಿಕಲ್ ಗವರ್ನ್ಮೆಂಟಿನ ಇನ್ಸ್ಟ್ರಾಮೆಯಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜಾದೊಂದಿಗೆ 1904ನೆ ಜುಲೈ 18ನೆ ತಾರೀಖಿನಾರಭ್ಯ ಮೈಸೂರ ಸರ್ವಿಸ್ ರೆಗ್ಯುಲೇಷಗಳ 165 A. ನೆ ಆರ್ಟಿಕಲ್ ಅನುಸರಿಸಿ ಮೂರು ತಿಂಗಳಿಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತೆ.

2. ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಎ. ಟಿ. ಸೆಟ್ಟ್ಲೂರ್, ಎಲ್. ಸಿ. ಇ., ಯವರು ತಮ್ಮ ಕೆಲಸದೊಂದಿಗೆ ಮೆ॥ ಸುಬ್ಬರಾಯರು ಫರ್ಲೋ ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ರಿಜಿಸ್ಟ್ರಾರವರ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿಯೇ ಇರತಕ್ಕದ್ದು.

ಹುಕುಂ ಬಮೋಜೀಬ್,
ಡಬ್ಲ್ಯೂ. ಎಫ್. ಸ್ಮೀತ್,
ಜಿಯೋಲಾಜಿಕಲ್ ಇಲಾಖೆಯ ಗವರ್ನ್ಮೆಂಟ್ ಸೆಕ್ರಿಟರಿ.